# ಮಕ್ಕಳ ರಕ್ಷಣೆಯ ದೊಡ್ಡ ಸವಾಲು

ಸಂಪನ್ಮೂಲಗಳ ಕೊರತೆಯ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳ ನಡುವಣ ಅಸಮರ್ಪಕ ಸಂವಹನವೂ ಮಕ್ಕಳ ಹಿತರಕ್ಷಣೆಗೆ ಇರುವ ಪ್ರಮುಖ ಅಡಚಣೆಯಾಗಿದೆ. ರಕ್ಷಣೆಯ ದೀರ್ಘ ಪ್ರಕ್ರಿಯೆಯಲ್ಲಿ ಬೀದಿಯಿಂದ ಬಂದ ಮಕ್ಕಳು ಮತ್ತೆ ಬೀದಿಪಾಲಾಗುವ ಸಾಧ್ಯತೆಗಳಿವೆ.

ಮಕ್ಕಳ ಸಹಾಯವಾಣಿ ಸಂಖ್ಯೆ '1098'ನ್ನು ಎಲ್ಲ ಶಾಲೆಗಳಲ್ಲಿ ಪ್ರದರ್ಶಿಸುವಂತೆ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಈ ಕ್ರಮ ಸ್ವಾಗತಾರ್ಹ. ಆದರೆ, ಜಾಗೃತಿಯ ಜೊತೆಜೊತೆಗೇ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಸಂಗಗಳೂ ವರ್ಷದಿಂದ ವರ್ಷಕ್ಕೆ ರಾಜ್ಯದಲ್ಲಿ ಹೆಚ್ಚುತ್ತಿರುವುದು ಸಮಾಜದ ಆರೋಗ್ಯದ ಬಗ್ಗೆ ಆತಂಕ ಹುಟ್ಟಿಸುವಂತಿದೆ.

ಮಕ್ಕಳ ಬಗೆಬಗೆಯ ಆತಂಕಗಳನ್ನು ಹಂಚಿಕೊಳ್ಳಲು ಪರಿಣಾಮಕಾರಿಯಾದ ವೇದಿಕೆಯಾಗಿ ಮಕ್ಕಳ ಸಹಾಯವಾಣಿ ಗುರ್ತಿಸಿಕೊಂಡಿದೆ. ಬಾಲ ಕಾರ್ಮಿಕರು, ಲೈಂಗಿಕ ಶೋಷಣೆ, ಬಾಲ್ಯವಿವಾಹ, ಮನೆ ಬಿಟ್ಟು ಓಡಿಬಂದ ಮಕ್ಕಳು, ಪೋಷಕರೇ ನಗರಗಳಲ್ಲಿ ಬಿಟ್ಟುಹೋದ ಬುದ್ಧಿಮಾಂದ್ಯ ಮತ್ತು ಅಂಗವಿಕಲ ಮಕ್ಕಳು, ಪರೀಕ್ಷೆಯ ಒತ್ತಡ, ಆತ್ಮಹತ್ಯೆಯ ಪ್ರಯತ್ನಗಳು– ಹೀಗೆ ಅನೇಕ ಬಗೆಯ ಸಮಸ್ಯೆಗಳು ಸಹಾಯವಾಣಿಯನ್ನು ತಲುಪುತ್ತಿವೆ. ಇವುಗಳ ಜೊತೆಗೆ ಶಾಲೆಗಳಲ್ಲಿ ಶಿಕ್ಷಕರಿಂದ ಶಿಕ್ಷೆಗೆ ಒಳಗಾದ ಮಕ್ಕಳ ಅಳಲು ಕೂಡ ದಾಖಲಾಗುತ್ತಿದೆ. ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅನ್ವಯ ಖಾಸಗಿ ಶಾಲೆಗಳಲ್ಲಿ ಅವಕಾಶ ವಂಚಿತ ವಿದ್ಯಾರ್ಥಿಗಳ ದೂರುಗಳೂ ಸಹಾಯವಾಣಿಗೆ ಬರುತ್ತಿವೆ. ಹೆಸರು ಹೇಳದೆಯೇ ದೂರು ನೀಡಲು ಅವಕಾಶ ಇರುವುದರಿಂದ ಮಕ್ಕಳು ಅಥವಾ ಅವರ ಪಾಲಕರು ಮುಕ್ತವಾಗಿ ಸಹಾಯವಾಣಿ ನೆರವು ಪಡೆಯಬಹುದು.

ರಾಜ್ಯದಲ್ಲಿ ಮಕ್ಕಳ ಸಹಾಯವಾಣಿ ಆರಂಭವಾದುದು 2002ರಲ್ಲಿ. ಈ ಹತ್ತು ವರ್ಷಗಳ ಅವಧಿಯಲ್ಲಿ ಸುಮಾರು 6.4 ಲಕ್ಷ ಕರೆಗಳನ್ನು ಸಹಾಯವಾಣಿ ಸ್ವೀಕರಿಸಿದೆ. 2005–06ರಲ್ಲಿ ಸಹಾಯವಾಣಿ ನೆರವಿನಿಂದ 4203 ಮಕ್ಕಳ ರಕ್ಷಣೆ ಮಾಡಿರುವ 'ಬಾಸ್ಕೊ' ಸಂಸ್ಥೆ, 2011–12ರ ಸಾಲಿನಲ್ಲಿ 7306 ಮಕ್ಕಳನ್ನು ರಕ್ಷಿಸಿದೆ. ಈ ಹೆಚ್ಚಳ ಸಹಾಯವಾಣಿಯ ಕುರಿತ ಜಾಗೃತಿಯನ್ನು ಸೂಚಿಸುವುದರ ಜೊತೆಗೆ ಮಕ್ಕಳ ಶೋಷಣೆಯ ಪ್ರಮಾಣ ಹೆಚ್ಚುತ್ತಿರುವುದನ್ನೂ ಸಂಕೇತಿಸುವಂತಿದೆ. 'ಮಕ್ಕಳ ಹಕ್ಕುಗಳ ಟ್ರಸ್ಟ್'ನ ಜಿ. ನಾಗಸಿಂಹ ರಾವ್ ಅವರು ಹೇಳುವಂತೆ, 'ಪ್ರತಿದಿನವೂ ಬೆಂಗಳೂರಿನ ರೈಲ್ವೆ ನಿಲ್ದಾಣಗಳಲ್ಲಿ ಬೇರೆ ಪ್ರದೇಶಗಳಿಂದ ಓಡಿಬರುವ ಕನಿಷ್ಠ 18 ಮಕ್ಕಳು ಪತ್ತೆಯಾಗುತ್ತಿದ್ದಾರೆ. ವಿವಿಧ ರೀತಿಯ ಸಮಸ್ಯೆಗಳನ್ನು ಹೇಳಿಕೊಂಡು ಸುಮಾರು ಇನ್ನೂರು ಕರೆಗಳು ಸಹಾಯವಾಣಿಗೆ ಬರುತ್ತವೆ'.

ಮಕ್ಕಳ ಸಮಸ್ಯೆಗಳು ಹಾಗೂ ದೂರಿನ ಪ್ರಮಾಣ ನಿರಂತರವಾಗಿ ಹೆಚ್ಚುತ್ತಿದೆ. ಆದರೆ, ಈ ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸುವ ಕೆಲಸ ಆಗುತ್ತಿಲ್ಲ. ಮಕ್ಕಳ ಹಿತರಕ್ಷಣೆಗೆ ಕೆಲಸ ಮಾಡುವ ಸಂಸ್ಥೆಗಳು ಹಾಗೂ ವ್ಯಕ್ತಿಗಳದು ಅನೇಕ ಸಂದರ್ಭಗಳಲ್ಲಿ ಅಸಹಾಯಕ ಸ್ಥಿತಿ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆ ತಕ್ಕಮಟ್ಟಿಗೆ ನಿಯಂತ್ರಣದಲ್ಲಿದೆ. ಬೆಂಗಳೂರಿನಲ್ಲಿ ಪತ್ತೆಯಾಗುತ್ತಿರುವ ಒಂಟಿ ಮಕ್ಕಳಲ್ಲಿ ಬಾಂಗ್ಲಾ, ಪಶ್ಚಿಮ ಬಂಗಾಳ, ಜಾರ್ಖಂಡ್, ಬಿಹಾರದಿಂದ ಬರುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಮಕ್ಕಳೊಂದಿಗೆ ಸಂವಹನ ನಡೆಸಲು ಅನುವಾದಕರು ಹಾಗೂ ಕೌನ್ಸೆಲಿಂಗ್ ಪರಿಣಿತರ ಕೊರತೆಯನ್ನು ಮಕ್ಕಳ ರಕ್ಷಣೆಯಲ್ಲಿ ತೊಡಗಿರುವ ಸಂಸ್ಥೆಗಳು ಎದುರಿಸುತ್ತಿವೆ.

ಸಂಪನ್ಮೂಲಗಳ ಕೊರತೆಯ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳ ನಡುವಣ ಅಸಮರ್ಪಕ ಸಂವಹನವೂ ಮಕ್ಕಳ ಹಿತರಕ್ಷಣೆಗೆ ಇರುವ ಪ್ರಮುಖ ಅಡಚಣೆಯಾಗಿದೆ. ಸರ್ಕಾರದ ದೃಷ್ಟಿಯಲ್ಲಿ– ಬಾಲ ಕಾರ್ಮಿಕರು, ಶಿಕ್ಷಣ ಕ್ಷೇತ್ರ ಹಾಗೂ ಹೆಣ್ಣುಮಕ್ಕಳ ಕುರಿತ ಸಂಗತಿಗಳಷ್ಟೇ ಮಕ್ಕಳ ಹಿತರಕ್ಷಣೆಗೆ ಸಂಬಂಧಿಸಿದ್ದಾಗಿವೆ. ಇದಕ್ಕೆ ಹೊರತಾದ ಸಮಸ್ಯೆಗಳ ಪರಿಕಲ್ಪನೆಯೇ ವ್ಯವಸ್ಥೆಗೆ ಇದ್ದಂತಿಲ್ಲ. ಕೆಲವೊಮ್ಮೆ ಮಕ್ಕಳ ರಕ್ಷಣೆ ಎನ್ನುವುದು ಕಣ್ಣೊರೆಸುವ ಚಟುವಟಿಕೆಯಷ್ಟೇ ಆಗಿಬಿಡುತ್ತದೆ. ರಕ್ಷಣೆಯ ದೀರ್ಘ ಪ್ರಕ್ರಿಯೆಯಲ್ಲಿ ಬೀದಿಯಿಂದ ಬಂದ ಮಕ್ಕಳು ಮತ್ತೆ ಬೀದಿಪಾಲಾಗುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿಯೇ, 'ಮಕ್ಕಳ ಹಿತರಕ್ಷಣೆಗಾಗಿ ಶಿಕ್ಷಣ, ಕಾರ್ಮಿಕ, ಪೊಲೀಸ್ ಇಲಾಖೆಗಳೊಂದಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ ಒಟ್ಟಿಗೆ ಸೇರಿ ಕಾರ್ಯಸೂಚಿಯೊಂದನ್ನು ತಯಾರಿಸಬೇಕು' ಎನ್ನುವ 'ಮಕ್ಕಳ ಹಕ್ಕುಗಳ ಟ್ರಸ್ಟ್'ನ ಒತ್ತಾಯವನ್ನು ಗಮನಿಸಬೇಕು.

ಶಾಲೆಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಪ್ರದರ್ಶಿಸುವ ಮೂಲಕ ಅಸಹಾಯಕ ಮಕ್ಕಳಿಗೆ ಧ್ವನಿಯಾಗುವ ಸರ್ಕಾರದ ಉದ್ದೇಶ ಒಳ್ಳೆಯದು. ಆದರೆ, ಸಮರ್ಪಕ ಕಾರ್ಯಸೂಚಿ ಇಲ್ಲದೇ ಹೋದಲ್ಲಿ ಹಾಗೂ ಮಕ್ಕಳ ರಕ್ಷಣೆಗಾಗಿ ದುಡಿಯುವ ಸಂಸ್ಥೆಗಳನ್ನು ಬಲಪಡಿಸದೆ ಹೋದಲ್ಲಿ ಈ ಜಾಗೃತಿ ಕ್ರಮ ಒಂದು ಘೋಷಣೆಯಾಗಿಯಷ್ಟೇ ಉಳಿಯುತ್ತದೆ.

■ ರಘುನಾಥ ಚ.ಹ.



ಈಶ್ವರ್